**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ.ಸಿ. ನಂ.69/2023**

**ಚಾ.ಸಾಃ 21, ಫ್ರಾ.ಸಾಃ 07**

| | |
|---|---|
| ಸಾಕ್ಷಿದಾರನ ಹೆಸರು | ಸಂತೋಷ ಕಾಯ್ಕಿಣಿ |
| ತಂದೆಯ ಹೆಸರು | ಆನಂದ ಕಾಯ್ಕಿಣಿ |
| ವಯಸ್ಸು | 43 ವರ್ಷಗಳು |
| ಉದ್ಯೋಗ | ಪೋಲೀಸ್ ವೃತ್ತ-ನಿರೀಕ್ಷಕರು, ಕುಂದಾಪುರ ಗ್ರಾಮಾಂತರ ವೃತ್ತ |
| ವಾಸ್ತವ್ಯ | ಕುಂದಾಪುರ |

**ಸಾಕ್ಷಿಯನ್ನು ದಿನಾಂಕಃ 21-02-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಾನು ಸಪ್ಟೆಂಬರ್-2023 ರಿಂದ ಫೆಬ್ರುವರಿ-2024 ರವರೆಗೆ ಮತ್ತು ಜೂನ್-2024 ರಿಂದ ನಾನು ಮುರ್ಡೇಶ್ವರ ವೃತ್ತದಲ್ಲಿ ವೃತ್ತನಿರೀಕ್ಷಕನಾಗಿದ್ದು ಈ ಅವಧಿಯಲ್ಲಿ ನಾನು ಹೊನ್ನಾವರ ವೃತ್ತದ ಪ್ರಭಾರ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 21-09-2023 ರಂದು ನಾನು ಈ ಕೇಸಿನ ಕಡತವನ್ನು ಚಾಸಾ-20 ರಿಂದ ಪಡೆದುಕೊಂಡಿರುತ್ತೇನೆ.

ದಿಃ 16-10-2023 ರಂದು ಅಪಘಾತಕ್ಕೊಳಗಾಗಿದ್ದ ಬೈಕ್ ಸಂಖ್ಯೆಃಕೆಎ-47/ಎಕ್ಸ-6151 ರ ಆರ್.ಸಿ. ಮಾಲೀಕರಾದ ಚಾ.ಸಾ. 8 ರವರು ಠಾಣೆಗೆ ಹಾಜರಾಗಿದ್ದರಿಂದ ಅವರಿಗೆ ಕಲಂ 133 ರಡಿಯಲ್ಲಿ ನೋಟೀಸು ನೀಡಿ ಅವರಿಂದ ಉತ್ತರವನ್ನು ಪಡೆದುಕೊಂಡಿರುತ್ತೇನೆ. ನೋಟೀಸನ್ನು ನೋಡುತ್ತಿದ್ದು ನಿಪಿ-16 ಎಂದು, ಸಾಕ್ಷಿ ಸಹಿಯನ್ನು ನಿಪಿ-16(ಎ) ಎಂದು, ಉತ್ತರವನ್ನು ನಿಪಿ-17 ಎಂದು, ಸಾಕ್ಷಿ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು. ಅವರಿಂದ ಬೈಕನ ದಾಖಲಾತಿಗಳನ್ನು ಪರಿಶೀಲಿಸಿ ಇಂಡೆಮ್ನಿಟಿ ಬಾಂಡ್ ಪಡೆದು ಬೈಕನ್ನು ಅವರ ಸ್ವಾಧೀನಕ್ಕೆ ನೀಡಿರುತ್ತೇನೆ.

ದಿನಾಂಕ 24-10-2023 ರಂದು ತನಿಖೆ ಪೂರೈಸಿ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಎ ಎಲ್ ಎ ಡಿ ಸಿ ಕಾನೂನು ಸೇವಾ ಸಮಿತಿಯ ವಕೀಲರಿಂದಃ**

ನಾನು ಸರಿಯಾಗಿ ತನಿಖೆ ಮಾಡದೇ ಆರೋಪಿತರ ವಿರುದ್ದ ಯಾವುದೇ ಸಾಕ್ಷ್ಯಗಳು ಲಭ್ಯವಿಲ್ಲದಿದ್ದರೂ ಮೃತನ ಕುಟುಂಬಕ್ಕೆ ಸಹಾಯ ಮಾಡಲು ಮೃತನ ತಪ್ಪಿಂದಲೇ ಅಪಘಾತ ಆಗಿದ್ದರೂ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**